(ರೂ ಲಕ್ಷಗಳಲ್ಲಿ)

ಕ್ರ ಸಂ	ವರ್ಷ	ಆಯವ್ಯಯದ ಅನುದಾನ		
		ಭಾರಿ ಮತ್ತು ಮಧ್ಯಮ	ಕಾಡಾ	ಒಟ್ಟು
1	2004–05	169315 59	2271 88	171587 47
2	2005–06	286440 62	4672 00	291112 62
2	2006–07	323744 65	5040 40	323785 05

816(298) ಶ್ರೀ ನರೇಂದ್ರಬಾಬು ನೆ ಲ (ರಾಜಾಜಿನಗರ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ರಾಜ್ಯದಲ್ಲಿರುವ ಜಮೀನುಗಳ ಸರ್ವೆಯನ್ನು ಅಮೂಲಾಗ್ರವಾಗಿ ಯಾವ ವರ್ಷದಲ್ಲಿ ಮಾಡಲಾಗಿದೆ

ಆ) ಹೊಸದಾಗಿ ಸರ್ವೆ ಕಾರ್ಯವನ್ನು ಆರಂಭಿಸುವ ಯೋಜನೆ ಸರ್ಕಾರದ ಮುಂದಿದೆಯೇ,

ಇ) ರಾಜ್ಯದಲ್ಲಿರುವ ಒಟ್ಟು ಸರ್ವೆ ನಂಬರುಗಳು ಎಷ್ಟು ಹಾಗೂ ಅವು ಯಾವುದು ,

ಈ) ಸರ್ವೆ ಕಾರ್ಯವನ್ನು ಖಾಸಗಿ ವ್ಯಕ್ತಿಗಳಿಗೆ ವಹಿಸಿರುವುದರಿಂದ ಹಲವಾರು ಜಮೀನುದಾರರಿಗೆ ಅನ್ಯಾಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಉ) ರಾಜ್ಯದಲ್ಲಿರುವ ಸರ್ವೆಯರ್ ಹುದ್ದೆಗಳು ಎಷ್ಟು , ಅದರಲ್ಲಿ ನೇಮಕಾತಿ ಮಾಡದೆ ಬಾಕಿ ಉಳಿದಿರುವ ಹುದ್ದೆಗಳು ಎಷ್ಟು?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) ರಾಜ್ಯದಲ್ಲಿ ಭೂಮಾಪನ ಕಾರ್ಯವು ಈ ಕೆಳಗೆ ವಿವರಿಸಿರುವ ಅವಧಿಯಲ್ಲಿ ಕೈಗೊಳ್ಳಲಾಗಿರುತ್ತದೆ –

ಅ) ಹಳೆ ಮೈಸೂರು ಪ್ರಾಂತ್ಯದಲ್ಲಿ 1863 ರಿಂದ 1898

ಆ) ಮುಂಬೈ ಕರ್ನಾಟಕ ಪ್ರಾಂತ್ಯದಲ್ಲಿ 1840 ರಿಂದ 1863

ಇ) ಮದರಾಸು ಪ್ರಾಂತ್ಯದಲ್ಲಿ 1863 ರಿಂದ 1904

ಈ) ಹೈದರಾಬಾದ್ ಕರ್ನಾಟಕ ಪ್ರಾಂತ್ಯದಲ್ಲಿ 1875 ರಿಂದ 1888

ಉ) ಕೊಡಗು ಪ್ರಾಂತ್ಯದಲ್ಲಿ 1806 ರಿಂದ 1816

ಆ) ಇಲ್ಲ

ಇ) 1994ರ ಲಭ್ಯವಿರುವ ಮಾಹಿತಿಯಂತೆ ರಾಜ್ಯದಲ್ಲಿ 44,64,240 ಸರ್ವೆ ನಂಬರುಗಳಿದ್ದು, ಈ ಪೈಕಿ ಪೋಡಾದ ಹಿಸ್ಸೆ ನಂಬರುಗಳು 10163762 ಇರುತ್ತವೆ

ಕ-೨೨

ಈ) ಬಂದಿದೆ– ಈ ಯೋಜನೆಯನ್ನು ಪರವಾನಗಿ ಭೂಮಾಪಕರು ಅನುಷ್ಠಾನಗೊಳಿಸುವಾಗ ಜಮೀನುದಾರರಿಗೆ ತೊಂದರೆಯಾಗಿದೆ ಎಂಬುದರ ಬಗ್ಗೆ ಸರ್ಕಾರಕ್ಕೆ ದೂರುಗಳು ಬಂದಿದ್ದು, ಅವುಗಳನ್ನು ಪ್ರತ್ಯೇಕವಾಗಿ ಪರಿಶೀಲಿಸಿ ಅಗತ್ಯ ಕಂಡಲ್ಲಿ ಪರವಾನಗಿಯನ್ನು ರದ್ದುಪಡಿಸಲಾಗಿದೆ ಮತ್ತು ಸಂಬಂಧಿಸಿದ ಅಧಿಕಾರಿಗಳಿಗೆ ಆಗಿಂದಾಗ್ಗೆ ಸೂಚನೆ ನೀಡಿ ಜಮೀನುದಾರರಿಗೆ ಯಾವುದೇ ಕಾರಣದಿಂದ ತೊಂದರೆಯಾಗದಂತೆ ಎಚ್ಚರಿಕೆ ವಹಿಸುವಂತೆ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆಗಳನ್ನು ನೀಡಲಾಗಿದೆ

ಉ) ದ್ವಿತೀಯ ದರ್ಜೆ ಭೂಮಾಪಕರ 2108 ಹುದ್ದೆಗಳಿದ್ದು, ಈ ಪೈಕಿ ನೇಮಕಾತಿ ಮಾಡದೆ ಬಾಕಿ 523 ಹುದ್ದೆಗಳಿರುತ್ತದೆ

817 (299) ಶ್ರೀ ನರೇಂದ್ರ ಬಾಬು ನೆ ಲ (ರಾಜಾಜಿನಗರ) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ರಾಜ್ಯದಲ್ಲಿರುವ ಪಶು–ಪಕ್ಷಿಗಳ ಸಂಖ್ಯೆ ಎಷ್ಟು?

ಆ) ಈ ಪ್ರಾಣಿ ಪಕ್ಷಿಗಳ ಗಣತಿ ಕಾರ್ಯವನ್ನು ಯಾವ ವರ್ಷದಲ್ಲಿ ಮಾಡಲಾಗಿದೆ(ವರ್ಷವಾರು ಅಂಕಿ–ಅಂಶಗಳನ್ನು ಒದಗಿಸುವುದು)?

ಇ) ಪಶು–ಪಕ್ಷಿಗಳ ಸಂರಕ್ಷಣೆಗಾಗಿ ಸರ್ಕರ ತೆಗೆದುಕೊಂಡಿರುವ ಕ್ರಮಗಳು ಏನು?

ಈ) ಬೆಂಗಳೂರು ನಗರ ಮತ್ತು ಸುತ್ತಮುತ್ತ ಮರಗಿಡಗಳನ್ನು ಕಡಿಯುತ್ತಿರುವುದರಿಂದ ಪಕ್ಷಿಗಳ ಸಂಖ್ಯೆ ಕಡಿಮೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಈ ಪಕ್ಷಿಗಳ ಸಂಕುಲವನ್ನು ಉಳಿಸಿ ಬೆಳೆಸಲು ಸರ್ಕಾರ ತೆಗೆದುಕೊಂಡಿರುವ ಯೋಜನೆಗಳು ಯಾವುವು?

ಶ್ರೀ ಸಿ ಚನ್ನಿಗಪ್ಪ, (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ಪಶು–ಪಕ್ಷಿಗಳ ಗಣತಿಯನ್ನು ಮಾಡಿರುವುದಿಲ್ಲ

ಆ) 1 ಕರ್ನಾಟಕ ರಾಜ್ಯದಲ್ಲಿ 1997–98 ರಲ್ಲಿ ಇಲಾಖೆಯಿಂದ ಕೆಲವು ಪ್ರಮುಖ ವನ್ಯಪ್ರಾಣಿಗಳ ಗಣತಿ ಮಾಡಿದ್ದು ಅದರಂತೆ ಕೆಳಕಂಡಂತಿದೆ

ಕ್ರ.ಸಂ	ವಿವರ	ಸಂಖ್ಯೆ
1	ಹುಲಿ	395
2	ಕಾಡೆಮ್ಮೆ	1360
3	ಆನೆ	6061
4	ಚಿರತೆ	613
5	ಕರಡಿ	2652
6	ಕಾಡು ಹಂದಿ	14680
7	ಜಿಂಕೆಗಳು	26930